सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕರ್ನಾಟಕ ರಾಜ್ಯ ಸಹಕಾರ ಮಾರಾಟ
ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ,
ನಂ.8, ಕನ್ನಿಂಗ್‌ಹ್ಯಾಮ್ ರಸ್ತೆ,
ಬೆಂಗಳೂರು-560052.

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ 09 ಇಯುಬಿ 2016**
**ಬೆಂಗಳೂರು, ದಿನಾಂಕ: 31-03-2016.**

ಗ್ರಾಮ ಪಂಚಾಯಿತಿಗಳಿಂದ ಉನ್ನತೀಕರಿಸಿರುವ **53** ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆ ಹಾಗೂ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಪುರಸಭೆಯ ಒಂದು ವಾರ್ಡಿಗೆ ಉಪಚುನಾವಣೆಯನ್ನು ನಡೆಸಲು ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಮುನಿಸಿಪಾಲಿಟೀಸ್ (ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ನಿಯಮ 3(1) ರನ್ವಯ **ಅನುಬಂಧ 1&2** ರಲ್ಲಿ ಲಗತ್ತಿಸಿರುವ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಲು ಈ ಕೆಳಕಂಡಂತೆ ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಿದೆ.

## ಚುನಾವಣಾ ವೇಳಾ ಪಟ್ಟಿ

| | | |
|---|---|---|
| 1 | ಜಿಲ್ಲಾಧಿಕಾರಿಗಳು, ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | 05-04-2016 (ಮಂಗಳವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 12-04-2016 (ಮಂಗಳವಾರ) |
| 3 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 13-04-2016 (ಬುಧವಾರ) |
| 4 | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | 15-04-2016 (ಶುಕ್ರವಾರ) |
| 5 | ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಮತದಾನದ ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆಯವರೆಗೆ) | 24-04-2016 (ಭಾನುವಾರ) |
| 6 | ಮರು ಮತದಾನ ಇದ್ದಲ್ಲಿ ಮತದಾನದ ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ | 26-04-2016 (ಮಂಗಳವಾರ) |
| 7 | ಮತಗಳ ಎಣಿಕೆಯು ಬೆಳಿಗ್ಗೆ 8.00 ಗಂಟೆಯಿಂದ (ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ) | 27-04-2016 (ಬುಧವಾರ) |
| 8 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯ ಗೊಳಿಸಬೇಕೋ ಆ ದಿನಾಂಕ ಮತ್ತು ದಿನ | 27-04-2016 (ಬುಧವಾರ) |

ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ, ರಾಮನಗರ, ದಾವಣಗೆರೆ, ಚಿತ್ರದುರ್ಗ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಹಾವೇರಿ, ದಕ್ಷಿಣಕನ್ನಡ,

ಉತ್ತರಕನ್ನಡ, ಮತ್ತು ಉಡುಪಿ ಜಿಲ್ಲೆ ರವರು, ಆಯೋಗವು ಆದೇಶಿಸಿರುವ ಚುನಾವಣಾ ವೇಳಾಪಟ್ಟಿಯನ್ನು ಅನುಸರಿಸಿ ಕರ್ನಾಟಕ ಮುನಿಸಿಪಾಲಿಟೀಸ್ (ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ನಿಯಮ 8ರ ಪ್ರಕಾರ ಅಧಿಸೂಚನೆಯನ್ನು ಪ್ರಪತ್ರ 1ರಂತೆ ಹೊರಡಿಸತಕ್ಕದ್ದು. ಹಾಗೆಯೇ ಹೊರಡಿಸಲಾದ ಅಧಿಸೂಚನೆಯನ್ನು ಅದೇ ದಿನದಂದು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು. ಪ್ರಕಟಿತ ಅದಿಸೂಚನೆಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಕಚೇರಿ ಹಾಗೂ ಇನ್ನಿತರ ಮುಖ್ಯ ಸ್ಥಳಗಳಲ್ಲಿಯೂ ಸಹಾ ಪ್ರದರ್ಶಿಸತಕ್ಕದ್ದು. ಅಧಿಸೂಚನೆಯ ಪ್ರತಿಯನ್ನು ಚುನಾವಣಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ದಿನದಂದು ಪ್ರಪತ್ರ-1ಎ ರಲ್ಲಿ ಚುನಾವಣಾ ನೋಟೀಸನ್ನು ಪ್ರಕಟಿಸುವಂತೆ ಅವರಿಗೆ ಸೂಚನೆಗಳನ್ನು ನೀಡತಕ್ಕದ್ದು. ಚುನಾವಣೆ ನಡೆಯುವ ವಿಷಯವನ್ನು ಸಾರ್ವಜನಿಕರ ಮಾಹಿತಿಗಾಗಿ ದಿನಪತ್ರಿಕೆಗಳಲ್ಲಿ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ (ವೆಚ್ಚ ಬಾರದಂತೆ) ಪ್ರಕಟಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು, ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಿ ನೇಮಕಾತಿ ಆದೇಶವನ್ನು ಆಯೋಗಕ್ಕೆ ಕಳುಹಿಸುವುದು.

ಸದಾಚಾರ ಸಂಹಿತೆಯು ಆಯೋಗದಿಂದ ಚುನಾವಣಾ ವೇಳಾ ಪಟ್ಟಿಯನ್ನು ಹೊರಡಿಸಿದ ದಿನಾಂಕದಿಂದ ಅಂದರೆ **ದಿನಾಂಕ:31-03-2016** ರಿಂದ ಜಾರಿಗೆ ಬಂದಿದ್ದು, ಚುನಾವಣಾ ಪ್ರಕ್ರಿಯೆಯು ಮುಕ್ತಾಯಗೊಳ್ಳುವವರೆಗೆ ಅಂದರೆ **ದಿನಾಂಕ: 27-04-2016 ರವರೆಗೆ** ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಮಾತ್ರ ಜಾರಿಯಲ್ಲಿರುತ್ತದೆ. ಸದಾಚಾರ ಸಂಹಿತೆಯು ಯಾವುದೇ ರೀತಿಯಲ್ಲೂ ಉಲ್ಲಂಘನೆಯಾಗದಂತೆ ಜಿಲ್ಲಾಧಿಕಾರಿಯವರು ಕ್ರಮವಹಿಸತಕ್ಕದ್ದು.

ಆದೇಶಾನುಸಾರ

KQthaeam 31/3/16
(ಕವಿತಾರಾಣಿ ಆರ್.)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ.

**ಇವರಿಗೆ:**

ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ, ರಾಮನಗರ, ದಾವಣಗೆರೆ, ಚಿತ್ರದುರ್ಗ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಹಾವೇರಿ, ದಕ್ಷಿಣಕನ್ನಡ, ಉತ್ತರಕನ್ನಡ ಮತ್ತು ಉಡುಪಿ ಜಿಲ್ಲೆ ರವರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ರವರಿಗೆ ಈ ಆದೇಶವನ್ನು ಈ ದಿನವೇ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 25 ಪ್ರತಿಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡುವುದು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ

ರಾಚುಆ 09 ಇಯುಬಿ 2016

# ಅನುಬಂಧ-1

## ಗ್ರಾಮ ಪಂಚಾಯಿತಿಗಳಿಂದ ಉನ್ನತೀಕರಿಸಿರುವ 53 ನಗರ ಸ್ಥಳೀಯ ಸಂಸ್ಥೆಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಗ್ರಾಮ ಪಂಚಾಯ್ತಿಯಿಂದ ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಉನ್ನತೀಕರಿಸಿರುವ ಸಂಸ್ಥೆಗಳು | ವಾರ್ಡ್ ಸಂಖ್ಯೆ |
|---|---|---|---|
| 1 | | ಹೆಬ್ಬಗೋಡಿ ನಗರಸಭೆ | 31 |
| 2 | | ಅತ್ತಿಬೆಲೆ ಪುರಸಭೆ | 23 |
| 3 | ಬೆಂಗಳೂರು ನಗರ | ಜಿಗಣಿ ಪುರಸಭೆ | 23 |
| 4 | | ಬೊಮ್ಮಸಂದ್ರ ಪುರಸಭೆ | 23 |
| 5 | | ಚಂದಾಪುರ ಪುರಸಭೆ | 23 |
| 6 | ರಾಮನಗರ | ಬಿಡದಿ ಪುರಸಭೆ | 23 |
| 7 | ದಾವಣಗೆರೆ | ಮಲೆಬೆನ್ನೂರು ಪುರಸಭೆ | 23 |
| 8 | ಚಿತ್ರದುರ್ಗ | ನಾಯಕನಹಟ್ಟಿ ಪಟ್ಟಣಪಂಚಾಯಿತಿ | 16 |
| 9 | | ಮಸ್ಕಿ ಪುರಸಭೆ | 23 |
| 10 | | ಸಿರವಾರ ಪಟ್ಟಣಪಂಚಾಯಿತಿ | 20 |
| 11 | ರಾಯಚೂರು | ಕವಿತಾಳ ಪಟ್ಟಣಪಂಚಾಯಿತಿ | 16 |
| 12 | | ತುರ್ವಿಹಾಳ ಪಟ್ಟಣಪಂಚಾಯಿತಿ | 14 |
| 13 | | ಬಳಗಾನೂರು ಪಟ್ಟಣಪಂಚಾಯಿತಿ | 12 |
| 14 | ಯಾದಗಿರಿ | ಕೆಂಭಾವಿ ಪುರಸಭೆ | 23 |
| 15 | | ಕಕ್ಕೇರಾ ಪುರಸಭೆ | 23 |
| 16 | | ಕಾರಟಗಿ ಪುರಸಭೆ | 23 |
| 17 | ಕೊಪ್ಪಳ | ತಾವರೆಗೇರಾ ಪಟ್ಟಣಪಂಚಾಯಿತಿ | 18 |
| 18 | | ಕುಕನೂರು ಪಟ್ಟಣಪಂಚಾಯಿತಿ | 19 |
| 19 | | ಕನಕಗಿರಿ ಪಟ್ಟಣಪಂಚಾಯಿತಿ | 17 |
| 20 | | ಕುರೇಕುಪ್ಪ ಪುರಸಭೆ | 23 |
| 21 | ಬಳ್ಳಾರಿ | ಹಗರಿಬೊಮ್ಮನಹಳ್ಳಿ ಪುರಸಭೆ | 23 |
| 22 | | ಕುರುಗೋಡು ಪುರಸಭೆ | 23 |
| 23 | | ಹಾರುಗೇರಿ ಪುರಸಭೆ | 23 |
| 24 | | ಮುಗಳ್‌ಖೋಡ ಪುರಸಭೆ | 23 |
| 25 | | ಮುನವಳ್ಳಿ ಪುರಸಭೆ | 23 |
| 26 | ಬೆಳಗಾವಿ | ಉಗಾರ್‌ಖುರ್ದಾ ಪುರಸಭೆ | 23 |
| 27 | | ಎಂ.ಕೆ.ಹುಬ್ಬಳ್ಳಿ ಪಟ್ಟಣಪಂಚಾಯಿತಿ | 14 |
| 28 | | ಕಂಕನವಾಡಿ ಪಟ್ಟಣಪಂಚಾಯಿತಿ | 17 |
| 29 | | ನಾಗನೂರ ಪಟ್ಟಣಪಂಚಾಯಿತಿ | 17 |

| | | | |
|---|---|---|---|
| 30 | | ಯಕ್ಸಾಂಬ ಪಟ್ಟಣಪಂಚಾಯಿತಿ | 17 |
| 31 | | ಚನ್ನಮ್ಮನ ಕಿತ್ತೂರು ಪಟ್ಟಣಪಂಚಾಯಿತಿ | 18 |
| 32 | | ಮಲ್ಲಾಪುರ.ಪಿ.ಜಿ. ಪಟ್ಟಣಪಂಚಾಯಿತಿ | 17 |
| 33 | | ಅರಭಾವಿ ಪಟ್ಟಣಪಂಚಾಯಿತಿ | 16 |
| 34 | | ಐನಾಪುರ ಪಟ್ಟಣಪಂಚಾಯಿತಿ | 19 |
| 35 | | ಶೇಡಬಾಳ ಪಟ್ಟಣಪಂಚಾಯಿತಿ | 16 |
| 36 | | ಚಿಂಚಿಲಿ ಪಟ್ಟಣಪಂಚಾಯಿತಿ | 19 |
| 37 | | ಬೋರಗಾವ ಪಟ್ಟಣಪಂಚಾಯಿತಿ | 17 |
| 38 | | ಕಲ್ಲೋಳ್ಳಿ ಪಟ್ಟಣಪಂಚಾಯಿತಿ | 16 |
| 39 | | ಕಬ್ಬೂರ ಪಟ್ಟಣಪಂಚಾಯಿತಿ | 19 |
| 40 | ವಿಜಯಪುರ | ನಲತವಾಡ ಪಟ್ಟಣಪಂಚಾಯಿತಿ | 14 |
| 41 | | ನಿಡಗುಂದಿ ಪಟ್ಟಣಪಂಚಾಯಿತಿ | 16 |
| 42 | | ದೇವರಹಿಪ್ಪರಗಿ ಪಟ್ಟಣಪಂಚಾಯಿತಿ | 17 |
| 43 | | ಚಡಚಣ ಪಟ್ಟಣಪಂಚಾಯಿತಿ | 16 |
| 44 | | ಆಲಮೇಲ ಪಟ್ಟಣಪಂಚಾಯಿತಿ | 19 |
| 45 | | ಮನಗೂಳಿ ಪಟ್ಟಣಪಂಚಾಯಿತಿ | 16 |
| 46 | | ಕೊಲ್ಹಾರ ಪಟ್ಟಣಪಂಚಾಯಿತಿ | 17 |
| 47 | ಬಾಗಲಕೋಟೆ | ಕಮತಗಿ ಪಟ್ಟಣಪಂಚಾಯಿತಿ | 16 |
| 48 | | ಬೆಳಗಲಿ ಪಟ್ಟಣಪಂಚಾಯಿತಿ | 18 |
| 49 | ಹಾವೇರಿ | ಗುತ್ತಲ ಪಟ್ಟಣಪಂಚಾಯಿತಿ | 18 |
| 50 | ದಕ್ಷಿಣಕನ್ನಡ | ವಿಟ್ಲ ಪಟ್ಟಣಪಂಚಾಯಿತಿ | 18 |
| 51 | | ಕೋಟೆಕಾರು ಪಟ್ಟಣಪಂಚಾಯಿತಿ | 17 |
| 52 | ಉತ್ತರಕನ್ನಡ | ಜಾಲಿ ಪಟ್ಟಣಪಂಚಾಯಿತಿ | 20 |
| 53 | ಉಡುಪಿ | ಕಾಪು ಪುರಸಭೆ | 23 |

ಆದೇಶಾನುಸಾರ

K Atharani 31/3/16

(ಕವಿತಾರಾಣಿ ಆರ್.)

ಅಧೀನ ಕಾರ್ಯದರ್ಶಿ

ರಾಜ್ಯ ಚುನಾವಣಾ ಆಯೋಗ.

## ಅನುಬಂಧ–2

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಯ ಹೆಸರು | ವಾರ್ಡ್ ಸಂಖ್ಯೆ |
|---|---|---|---|
| 1 | ದಾವಣಗೆರೆ | ಹರಪನಹಳ್ಳಿ ಪುರಸಭೆ | 06 |

ಆದೇಶಾನುಸಾರ

Kavitharani 31/3/16

(ಕವಿತಾರಾಣಿ ಆರ್.)

ಅಧೀನ ಕಾರ್ಯದರ್ಶಿ

ರಾಜ್ಯ ಚುನಾವಣಾ ಆಯೋಗ